ಸ್ಕೀಂ ನಮ್ಮ ನಗರ ಪ್ರದೇಶದಲ್ಲಿ ಬರುವುದಿಲ್ಲ. ಆದ್ದರಿಂದ ಈ ಸ್ಕೀಮುಗಳ ಕೆಳಗೆ ದುರಸ್ತಿ ಮಾಡುವ ಪರಿಸ್ಥಿತಿ ಇಲ್ಲ. ಇಂತಹ ತೊಂದರೆಗಳ ಬಗ್ಗೆ ತಾವು ಏನು ವಿಚಾರ ಮಾಡುತ್ತೀರಿ ?

ಶ್ರೀ ಡಿ. ಮಂಜುನಾಥ್.—ನಗರ ಪ್ರದೇಶಗಳಲ್ಲಿ ಎನ್.ಆರ್.ಇ.ಪಿ.ಯಲ್ಲಿ ಮಾಡುವುದಕ್ಕಾಗುವುದಿಲ್ಲ. ನಾನು ಹೇಳಿದ್ದಾದು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಬೇಕು ಎಂದು ಮಂತ್ರಿ ಬಾಡಿಗೆ ನಿಯಂತ್ರಣದ ಮೂಲಕ ಖಾಲಿ ಮಾಡಿಸಿ ಹುಡುಗರನ್ನು ಹೊರಗೆ ಹಾಕಿದ್ದಾರೆಂದು ಹೇಳಿದ್ದಾರೆ. ಅದು ನನ್ನ ಗಮನಕ್ಕೆ ಬಂದಿಲ್ಲ. ಬೇರೆ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು ನಡೆಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಜೊತೆಗೆ ಹಣದ ಕೊರತೆ ಇದೆ. ಕಳೆದ ವರ್ಷಕ್ಕಿಂತ ಈ ವರ್ಷ ಜಾಸ್ತಿ ಹಣವನ್ನು ಈ ಕೆಲಸಕ್ಕೆ ಇಟ್ಟು ಕೊಂಡಿದ್ದೇವೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಬೆಂಗಳೂರು ಮತ್ತು ಮೈಸೂರು ನಡುವೆ ಎಕ್ಸ್‌ಪ್ರೆಸ್ ವೇಗದ ಸಂಚಾರಕ್ಕೆ ಹೆದ್ದಾರಿಯನ್ನು ನಿರ್ಮಿಸುವುದು.

೧೨೨ ಶ್ರೀ ಜಿ. ರಾಜುಗೌಡ (ಹನೂರ್).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು, ಬೆಂಗಳೂರು ನಡುವೆ ಎಕ್ಸ್‌ಪ್ರೆಸ್ ವೇಗದ ಸಂಚಾರಕ್ಕೆ ವಿಸಲಾದ ಹೆದ್ದಾರಿ ನಿರ್ಮಿಸುವ ಬಗ್ಗೆ ರಾಜ್ಯ ಸರ್ಕಾರದ ನಿಲುವು ಏನು;

ಆ) ಏನೇ ಯೋಜನೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಬಾಬಿನಲ್ಲಿ ರಾಜ್ಯಕ್ಕೆ ದೊರೆಯಬಹುದಾದ ಪಾಲು ಎಷ್ಟು.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಸಚಿವರು).—

ಅ) ಬೆಂಗಳೂರು–ಮೈಸೂರು ರಸ್ತೆಯನ್ನು ನಾಲ್ಕು ವಾಹನ ಪಥಗಳುಳ್ಳ ಎಕ್ಸ್‌ಪ್ರೆಸ್ ಹೈವೇ ಮಾಡುವ ವಿಚಾರ ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ರಾಷ್ಟ್ರೀಯ ಹೆದ್ದಾರಿಗಳ ಬಾಬಿನಲ್ಲಿ ವಿನಿಯೋಗವನ್ನು ಕೇಂದ್ರ ಸರ್ಕಾರವು ಪ್ರತಿ ವರ್ಷವೂ ಆಯಾ ವರ್ಷಗಳಲ್ಲಿ ತೀರ್ಮಾನಿಸುವುದರಿಂದ ಒಟ್ಟು ಏನೇ ಯೋಜನೆಯಲ್ಲಿ ಎಷ್ಟು ಅನುದಾನವನ್ನು ಒದಗಿಸಲಾಗುತ್ತದೆ ಎಂಬುದು ಗೊತ್ತಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ —ಮಾನ್ಯ ಸದಸ್ಯರು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಕೂಡದು ಎಂದು ನಾನೇ ವಿವರವಾಗಿ ಹೇಳುತ್ತೇನೆ. ಬೆಂಗಳೂರು–ಮೈಸೂರು ರಸ್ತೆಯನ್ನು ಎಕ್ಸ್‌ಪ್ರೆಸ್ ಹೈವೇ ಮಾಡುವುದರ ಸಲುವಾಗಿ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಲಿಕ್ಕೆ ಟೆಂಡರ್ ಕರೆದಿದ್ದೇವೆ, ೧೮ ಟೆಂಡರ್ ಬಂದಿದೆ. ಅದು ಈಗಾಗಲೇ ಸರ್ಕಾರದ ಪರಿಶೀಲನಾ ಹಂತದಲ್ಲಿದೆ. ಇದಕ್ಕೆ ಸುಮಾರು ೧೮೦ ಕೋಟಿ ರೂಪಾಯಿಗಳು ಆಗಬಹುದು ಎನ್ನುವ ಅಭಿಪ್ರಾಯ ಇದೆ. ವರ್ಲ್ಡ್ ಬ್ಯಾಂಕ್, ಪಬ್ಲಿಕ್ ಟ್ರಾನ್ಸ್ ಪೋರ್ಟ್ ಆಪರೇಟರ್ಸ್, ಮತ್ತು ಮೇಕಿಂಗ್ ಯೂರೋ ಆಫ್ ದಿ ಬ್ಯಾಂಕ್ ಫೈನಾನ್ಸಿಸ್ ಈ ಮೂರರ ದಿಕ್ಕಿನಲ್ಲಿ ನಾವು ಪ್ರಿಲಿಮಿನರಿಯಾಗಿ ಕೆಲಸ ನಡೆಸಿದ್ದೇವೆ. ಇನ್ನು ನ್ಯಾಷನಲ್ ಹೈವೇಗೆ ದುಡ್ಡು ಎಷ್ಟು ಬರುತ್ತದೆ ಎಂದು ಕೇಳಿದ್ದಾರೆ. ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಇಷ್ಟು ದುಡ್ಡು ಕೊಡುತ್ತೇವೆ ಎಂದು ಕೇಂದ್ರದವರು ಇಂಡಿಕೇಟ್ ಮಾಡಿಲ್ಲ ೧೫೦ ಕೋಟಿ ರೂಪಾಯಿಗಳ ಅಂದಾಜುಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದಾರೆ. ಏನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಬಂದಿರತಕ್ಕಂಥಾದ್ದು ೪೬ ಕೋಟಿ ರೂಪಾಯಿಗಳು. ಈಗ ನಮಗೆ ಹಣ ಬರತಕ್ಕಂಥ ಧಾಟಿ ನೋಡಿದರೆ ೬೦–೬೫ ಕೋಟಿ ರೂಪಾಯಿಗಳು ಹಣ ಬರಬಹುದು ಎಂದು ನಿರೀಕ್ಷಣೆ ಮಾಡಿದ್ದೇವೆ. ಇನ್ನೂ ಹೆಚ್ಚು ಕೊಡಬೇಕು ಎಂದು ಕೇಂದ್ರಕ್ಕೆ ಒತ್ತಾಯ ಮಾಡಿದ್ದೇವೆ. ೭೦ ಕೋಟಿವರೆಗೆ ಬರಬಹುದು ಎಂಬ ಭಾವನೆ ಹೊಂದಿದ್ದೇವೆ.

ಶ್ರೀ ಜಿ. ರಾಜೂಗೌಡ.—ಬೆಂಗಳೂರು–ಮೈಸೂರು ರಸ್ತೆಯಲ್ಲಿ ವಾಹನಗಳ ದಟ್ಟಣೆ ಜಾಸ್ತಿಯಾಗಿರುವುದರಿಂದ ಆಗಾಗ್ಗೆ ಅಪಘಾತಗಳು ನಡೆಯುತ್ತವೆ, ಈಗ ಟೆಂಡರನ್ನು ಕರೆದಿದ್ದೇವೆ ಎಂದು

ಹೇಳುತ್ತಿದ್ದೀರಿ. ಹಾಗಾದರೆ ಯಾವಾಗ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು? ರಾಷ್ಟ್ರೀಯ ಹೆದ್ದಾರಿಗಳ ಬಾಬಿನಲ್ಲಿ ನಮ್ಮ ರಾಜ್ಯ ಕಡಿಮೆ ಹಣ ಪಡೆಯುತ್ತಿದೆ ಎನ್ನುವ ಅಭಿಪ್ರಾಯ ಇದೆ. ಎಲ್ಲಾ ರಾಜ್ಯಗಳಿಗಿಂತ ಕರ್ನಾಟಕ ರಾಷ್ಟ್ರೀಯ ಹೆದ್ದಾರಿಗಳ ಬಾಬಿನಲ್ಲಿ ಹೆಚ್ಚು ಹಣ ಪಡೆಯಲು ಹಿಂದೆ ಬಿದ್ದಿದೆ; ಇದು ನಿಜವೇ? ಹಾಗಿದ್ದ ಪಕ್ಷದಲ್ಲಿ ಕೇಂದ್ರದಿಂದ ತಾವು ಹೆಚ್ಚಿಗೆ ಹಣ ಪಡೆಯುವುದಕ್ಕೆ ಏನು ಕಾರ್ಯಕ್ರಮ ರೂಪಿಸಿಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕು?

ಶ್ರೀ ಹೆಚ್ ಡಿ. ದೇವೇಗೌಡ.—ರಾಜ್ಯ ಹಿಂದೆ ಬಿದ್ದಿದೆ ಎನ್ನುವುದು ನಿಜ. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿದ್ದೇವೆ, ಹೇಳಿದ್ದೇವೆ, ಪತ್ರ ಬರೆದಿದ್ದೇವೆ, ಒತ್ತಾಯ ಮಾಡಿದ್ದೇವೆ. ಇನ್ನು ಸಂಬಂಧಪಟ್ಟ ಮಂತ್ರಿಗಳ ಮನೆಯ ಮುಂದೆ ಧರಣಿ ಮಾಡಬೇಕು ಎಂದರೆ ಮಾಡುತ್ತೇವೆ. ವೆಸ್ಟ್ ಬೆಂಗಾಲ್‌ನಲ್ಲಿ ಕುಳಿತಹಾಗೆ ಕೂಡಬೇಕು ಎಂದರೆ ಕೂರೋಣ. ಆ ರೀತಿ ಮಾಡುವುದು ಸರಿಯಲ್ಲ ಎನ್ನುವುದು ನಮ್ಮ ಭಾವನೆ. ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿ. ಇಲ್ಲಿ ವಾಹನಗಳ ಸಂಚಾರ ಹಿಂದಿನದಕ್ಕಿಂತ ಇಪ್ಪತ್ತು ಬಹುಪಟ ಹತ್ತು ಪಟ್ಟು ಹೆಚ್ಚಾಗಿದೆ ಎಂದರೆ ಆಶ್ಚರ್ಯಪಡಬೇಕಾಗಿಲ್ಲ. ಅದಕ್ಕೋಸ್ಕರ ನಾವು ಫ್ಲೈಓವರ್ ಕರೆದಿರುವುದು. ಕೆಲಸ ಮಾಡುವುದಕ್ಕೆ ಅಲ್ಲ, ಅದಕ್ಕೆ ಸಂಬಂಧಪಟ್ಟ ಪ್ಲಾನ್, ನಕಾಶೆ ತಯಾರು ಮಾಡುವುದು ಸುಲಭವಲ್ಲ. ಪ್ರಿಲಿಮಿನರಿ ರಿಪೋರ್ಟ್ ತಯಾರು ಮಾಡಲಿಕ್ಕೆ ಕರೆದಿದ್ದೇವೆ. ೧೮ ಜನ ಪಾರ್ಟಿಸಿಪೇಟ್ ಮಾಡಿದ್ದಾರೆ. ಅದರಲ್ಲಿ ಯಾವುದನ್ನು ಒಪ್ಪಿಕೊಳ್ಳುವುದು ಎನ್ನುವುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಗುಲ್ಬರ್ಗಾ ಜಿಲ್ಲೆಗೆ ಆಯವ್ಯಯದಲ್ಲಿ ನಿಗದಿಗೊಳಿಸಿರುವ ಕಾಮಗಾರಿಗಳು

೨೧೭. ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ (ಗುರು ಮಿಠಕಲ್).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಅದರಲ್ಲೂ ಯಾದಗಿರಿ ತಾಲ್ಲೂಕಿನಲ್ಲಿ ೧೯೮೬–೮೭ನೇ ಸಾಲಿನ ಆಯವ್ಯಯ ಪತ್ರಿಕೆಯಲ್ಲಿ ಮಂಜೂರಾದ ರಸ್ತೆ, ಸೇತುವೆ ಮತ್ತು ಕೆರೆಗಳ ಸಂಖ್ಯೆ ಎಷ್ಟು?

ಆ) ಇದರ ಪೈಕಿ ಎಷ್ಟು ಕೆಲಸಗಳು ಪ್ರಾರಂಭವಾಗಿರುತ್ತವೆ. (ಐಟಮ್) ಪ್ರಕಾರ ವರದಿಯನ್ನು ವಿವರಿಸಬೇಕು.

ಇ) ೧೯೮೬–೮೭ನೇ ಸಾಲಿನಲ್ಲಿ ಪ್ರತಿಯೊಂದು ಕೆಲಸಕ್ಕೆ ಒದಗಿಸಿದ ಒಟ್ಟು ಹಣದ ಮೊತ್ತ ಮತ್ತು ಈ ಕೆಲಸಗಳಿಗೆ ಖರ್ಚು ಮಾಡಿದ ಹಣವೆಷ್ಟು? (ಕೆಲಸಗಳ ವಾರ ವರದಿಯನ್ನು ವಿವರಿಸಬೇಕು).

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡ ಮತ್ತು ನೀರಾವರಿ ಸಚಿವರು).—

ಅ) ಗುಲ್ಬರ್ಗ ಜಿಲ್ಲೆಯಲ್ಲಿ ೧೯೮೬–೮೭ನೇ ಸಾಲಿನ ಆಯವ್ಯಯ ಪತ್ರಿಕೆಯಲ್ಲಿ ಸೇರಿರುವ ರಸ್ತೆ ಮತ್ತು ಸೇತುವೆಗಳ ಸಂಖ್ಯೆ;

				ಯಾದಗಿರಿ ತಾಲ್ಲೂಕಿನಲ್ಲಿ	
೧) ರಸ್ತೆಗಳು	...	೨೨೧	೧) ರಸ್ತೆಗಳು	...	೩೫
೨) ಸೇತುವೆಗಳು	...	೬೬	೨) ಸೇತುವೆಗಳು	...	೧೧
೩) ಸಣ್ಣ ನೀರಾವರಿ ಕೆಲಸಗಳು	...	೯೧	೩) ಸಣ್ಣ ನೀರಾವರಿ ಕೆಲಸಗಳು	...	೧೭

ಆ) ಗುಲ್ಬರ್ಗ ಜಿಲ್ಲೆಯಲ್ಲಿ ನಡೆಯುತ್ತಿರುವ ಕೆಲಸಗಳು ಈ ಕೆಳಗಿನಂತೆ ಇರುತ್ತವೆ.

೧) ರಸ್ತೆಗಳು	...	೮೫
೨) ಸೇತುವೆಗಳು	...	೨೦
೩) ಸಣ್ಣ ನೀರಾವರಿ ಕೆಲಸಗಳು	...	೫೫